ಶ್ರೀ ವೀರೇಂದ್ರ ಪಾಟೀಲ್.—ಆ ರೀತಿ ಆಗಿಲ್ಲ. ಜಿಲ್ಲಾವಾರು ಅರಾಟ್ ಮಾಡುವ ಪದ್ಧತಿ ಇದೆ. ಈಗ ಎಷ್ಟೋ ಪಂಪುಗಳ ಸರ್ವಿಸ್ ಆಗಿದೆ, ಪರ್ಕಂಟೇಜ್ ಕಡಿಮೆಯಿರುವ ಕಡೆ ನೋಡಿ ಅಲ್ಲಿಗೆ ಪ್ರಾಶಸ್ತ್ಯ ಕೊಡುತ್ತಿದೆ. ಆದರೆ ಯಾವುದಾಧರೂ ಜಿಲ್ಲೆಯಲ್ಲಿ ಜನರು ಸಾಲದ ರೂಪದಲ್ಲಿ ಹಣ ಸಹಾಯ ಮಾಡುವುದಾದರೆ ಅಲ್ಲಿ ಹೆಚ್ಚು ಖರ್ಚುಮಾಡಬಹುದು. ಹೆಚ್ಚು ಹಳ್ಳಿಗಳಿಗೆ ಸೌಲಭ್ಯ ಒದಗಿಸಬಹುದು.

Opening of Distributaries on the right side of Thungabhadra Left Bank Canal

45. Sri M. NAGAPPA (Raichur).—

Will the Minister for Public Works be pleased to state :—

(*a*) whether any survey for opening a Distributary on the right side of the Tungabhadra Left Bank Canal between miles 120 and 127 has been made ;

(*b*) if so, the stage at which the scheme is pending ;

(*c*) whether Government intend to complete this scheme as early as possible to help the people of the famine stricken area like Boidoddi, Bapur, Wadwathi, etc., under Yergera Circle, Raichur Taluk ?

A.—Sri VEERENDRA PATIL. (Minister for Public Works).—

(*a*) Yes.

(*b*) Distributaries on the right side of the Tungabhadra Project Left Bank Canal between miles 120 and 127 have been completed and opened for irrigation.

(*c*) The villages Boidoddi, Bapur, Wadawathi, etc., are situated in the Krishna Valley on the Left side of the Tungabhadra Project Left Bank Canal. The question of giving irrigation facilities to these villages will be examined when the Upper Krishna Project Stage-II is taken up for execution.

ಶ್ರೀ ಎಂ. ನಾಗಪ್ಪ.—ಮೊದಲು ಒರಿಜಿನರ್ ಪ್ಲಾನಿನ ಪ್ರಕಾರ ನಾನು ಪ್ರಶ್ನೆಯಲ್ಲಿ ಕೇಳಿರುವ ಗ್ರಾಮಗಳ ಪ್ರದೇಶಗಳು ತುಂಗಭದ್ರಾ ಎಡದಂಡೆ ನಾಲೆಯ ಬಲಗಡೆ ಉಪನಾಲೆಗಳಿಂದ ಇರಿಗೇಟ್ ಆಗುತ್ತಿದ್ದವಲ್ಲವೇ ?

†ಶ್ರೀ ವೀರೇಂದ್ರ ಪಾಟೀಲ್.—ಇಲ್ಲ. ಅವು ಎಡಗಡೆ ಇರುವುದರಿಂದ ಕೃಷ್ಣ ವ್ಯಾಲಿಯಲ್ಲಿ ಬರುತ್ತವೆ. ತುಂಗಭದ್ರಾ ವ್ಯಾಲಿಯಲ್ಲಿರುವ ಹಳ್ಳಿಗಳಿಗೇ ನೀರಿನ ಅಭಾವವಿರುವುದರಿಂದ ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಬಂದಾಗ ಮಾನ್ಯ ಸದಸ್ಯರುಕೇಳುವ ಊರುಗಳಿಗೆ ನೀರನ್ನೊದಗಿಸಲು ಸಾಧ್ಯ, ಈಗ ತುಂಗಭದ್ರಾ ನಾಲೆಯಿಂದ ಒದಗಿಸಲು ಪ್ರಯತ್ನ ಮಾಡಿದರೆ ಕೊನೆಯಲ್ಲಿರುವ ನಾಲೆ ಕೆಳಗಿನ ಜಮೀನಿಗೆ ತೊಂದರೆಯಾಗುವುದು ಎಂದುಅಧಿಕಾರಿಗಳು ಹೇಳುತ್ತಾರೆ.

ಶ್ರೀ ಎಂ. ನಾಗಪ್ಪ.—1947 ರ ಪ್ಲಾನಿನ ಪ್ರಕಾರ 1961 ರಲ್ಲಿ ಆದು ರಿವ್ಯೆಜ್ ಆಗುವುದಕ್ಕೆ ಮುಂಚೆ ನಾನು ಕೇಳಿರುವ ಎರಾ ಹಳ್ಳಿಗಳೂ ಕೂಡ ತುಂಗಭದ್ರಾ ನಾಲೆ ಪ್ರಾಜೆಕ್ಟ್ ಕೆಳಗೆ ಬರುತ್ತಿರಲಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಆ ಮೊದಲನೆಯ ಪ್ಲಾನಿನ ವಿಚಾರ ನನಗೆ ಗೊತ್ತಿಲ್ಲ, ಬೇಕಾದರೆ ಅಮೇಲೆ ನೋಡಿ ತಿಳಿಸಬಹುದು.

ಶ್ರೀ ಎಂ. ನಾಗಪ್ಪ.—ಮೊದಲನೆ ಪ್ಲಾನಿನ ಪ್ರಕಾರ ಈ ಹಳ್ಳಿಗಳು ತುಂಗಭದ್ರ ಕೆನಾಲ್ 'ಏನು ಗೊದ್ವಾಲನವರೆಗೆ ಹೋಗುತ್ತಿತ್ತು. ಆ ಪ್ರದೇಶದಲ್ಲಿ ಬರುತ್ತವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ ?

ಶ್ರೀ ವೀರೇಂದ್ರ ಪಾಟೀಲ್.—ಇದೀಗ ಹೇಳಿದೆ 1947 ರಲ್ಲಿ ಏನು ಪ್ಲಾನ್ ಕೊಟ್ಟರು, ಯಾವ ರೀತಿ ರಿವೈಸ್ ಆಗಿದೆ ಎನ್ನುವಂತಹ ಸಮಾಚಾರ ನನ್ನ ಮುಂದೆ ಇಲ್ಲ; ಅದಕ್ಕೆ ಪ್ರತ್ಯೇಕ ಪ್ರಶ್ನೆ ಕೇಳಿದಾಗ ಪೂರ್ತಿಯಾಗಿ ಮಾಹಿತಿ ಪಡೆದು ಈ ಸಭೆಗೆ ಒದಗಿಸುತ್ತೇನೆ.

ಶ್ರೀ ನದಾಶಿವ ಪಾಟೀಲ್.—ರೆಫ್ಟ್ ಬ್ಯಾಂಕಿಗೆ ಸಂಬಂಧಪಟ್ಟಂತೆ ದೇವದುರ್ಗ ತಾಲ್ಲೂಕಿನಲ್ಲಿ ಸುಮಾರು 2 ಸಾವಿರ ಎಕರೆ ನೀರಾವರಿಯಾಗುತ್ತದೆ ಎಂದು ಲೆಕ್ಕದಲ್ಲಿ ಮಾತ್ರ ಇದೆ. ವಾಸ್ತವವಾಗಿ ಫೀಲ್ಡ್‌ಚಾನಲ್ ಇಲ್ಲದ ಕಾರಣ 48 ಎಕರೆ ಮಾತ್ರ ಆಗಿ ಬಾಕಿ ಕೆಲಸ ನಿಂತಿರುವುದು ತಮ್ಮ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಒಂದು ವೇಳೆ ಫೀಲ್ಡ್ ಚಾನಲ್ ಇಲ್ಲದೇ ಡೆವಲಪ್‌ಮೆಂಟ್ ಆಗದಿದ್ದರೆ ಫೀಲ್ಡ್ ಚಾನಲ್‌ನ್ನು ಸರ್ಕಾರದಿಂದ ಖರ್ಚಿನಿಂದ ಕಟ್ಟಬೇಕೆಂದು ನಿರ್ಧಾರವಾಗಿದೆ ಆದಷ್ಟು ಜಾಗ್ರತೆ ಮಾಡುವುದಕ್ಕೆ ಹೇಳುತ್ತೇನೆ.

ಶ್ರೀ ಎಂ. ನಾಗಪ್ಪ.—ನೀರು ಕೊಡಲಕ್ಕೆ ಅದರ ಎಡಭಾಗದಲ್ಲಿ ಡಿಸ್ಟ್ರಿಬ್ಯೂಟರೀಸ್ ತೆಗೆದರೆ ಅನುಕೂಲವಾಗುತ್ತದೆ ಎಂದು ಹೇಳಿ ಒಂದು ರಿಪೋರ್ಟ್ ಇದೆ. ಅದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ನನ್ನ ಮುಂದೆ ಇರುವಂತಹ ಮಾಹಿತಿ ಪ್ರಕಾರ ಇನ್‌ವೆಸ್ಟಿಗೇಷನ್, ಪ್ಲಾನ್ ಎಸ್ಟಿಮೇಟು ಏನೂ ಆಗಿಲ್ಲ. ಜೋಪ್ರೋ ಷೀಟ್ ಮೇಲೆ ಲೆಕ್ಕ ಹಾಕಿರುವ ಪ್ರಕಾರ 60 ಲಕ್ಷ ರೂಪಾಯಿ ಆಗಬಹುದು. ಆ ಡಿಸ್ಟ್ರಿಬ್ಯೂಟರಿ ತೆಗೆದರೆ 14-15 ಸಾವಿರ ಎಕರೆಗೆ ನೀರಾವರಿಯು ಅನುಕೂಲವಾಗುತ್ತದೆ ಎಂದು ಇದೆ, ಡೀಟೇರ್ಡ್ ಎಸ್ಟಿಮೇಟ್ ಆಗಿಲ್ಲ.

ಶ್ರೀ ಎಂ. ನಾಗಪ್ಪ.—ಈ ಹಳ್ಳಿಗಳಿಗೆ ಮೊದಲು 20 ವರ್ಷದವರೆಗೂ ನೀರು ಬರುತ್ತದೆ ಎಂದು ಭರವಸೆ ಇಟ್ಟುಕೊಂಡು, ಆ 20 ವರ್ಷದ ಮೇಲೆ ನೀರು ಸಿಕ್ಕುವುದಿಲ್ಲ ಎಂದು ನಿರಾಶೆಪಡುವುದಕ್ಕಿಂತ 60 ಲಕ್ಷ ರೂಪಾಯಿ ಮಂಜೂರು ಮಾಡಿ ಅನುಕೂಲ ಮಾಡಿಕೊಡಲಕ್ಕೆ ತಾವು ಸಹಕಾರ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್...ಇದೀಗ ಹೇಳಿದೆ. 60 ಲಕ್ಷ ರೂಪಾಯಿ ಖರ್ಚು ಮಾಡಿ ಮಂಜೂರು ಮಾಡುವಂತಹ ಪ್ರಶ್ನೆ ಮತ್ತೊಂದು ಕಡೆ ಇದೆ. ಈಗ ರೆಫ್ಟ್ ಬ್ಯಾಂಕ್ ಚಾನಲ್‌ನಲ್ಲಿ 5 ಲಕ್ಷ 80 ಸಾವಿರ ಎಕರೆ ಕಮ್ಯಾಂಡ್ ಏರಿಯಾ ಇದೆ ಅದು ಡೆವಲಪ್ ಆದರೆ ಆಗ ನೀರು ಸಾಕಾಗದಂತಹ ಪರಿಸ್ಥಿತಿ ಬರುವುದರಿಂದ ಆಗ ಯೋಚನೆ ಮಾಡಬೇಕಾಗುತ್ತದೆ. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಬರುವುದರಿಂದ ಆ ಕಮ್ಯಾಂಡ್ ಏರಿಯಾದಲ್ಲಿ ಎಷ್ಟು ಬರುತ್ತದೆಯೋ ಅವನ್ನು ಅದರಿಂದ ತೆಗೆದುಕೊಳ್ಳಬಹುದಾದಂತಹ ಏರ್ಪಾಡು ಮಾಡಿದ್ದಾರೆ.

ಶ್ರೀ ಎಂ. ನಾಗಪ್ಪ.—ಇದನ್ನು ಮಾಡುವುದರಿಂದ 75 ಸಾವಿರ ಎಕರೆ ಹೆಚ್ಚು ಸಾಗುವಳಿಯಾಗಬಹುದು ಎಂದು ಹೇಳಿರುವ ತಮ್ಮ ಹೇಳಿಕೆಯನ್ನು ತಮ್ಮ ನೆನಪಿಗೆ ತಂದರೆ ಇದನ್ನು ವಿಚಾರ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಕೆನಾಲ್ ಕೆಪ್ಯಾಸಿಟಿ ಹೆಚ್ಚು ಮಾಡಿದರೆ ಏರಿಯಾ ಆಫ್ ಇರಿಗೇಷನ್ ಹೆಚ್ಚಾಗಬಹುದು ಎಂದು ಹೇಳಿ ಅದರ ಅರ್ಥವಲ್ಲ. ಆ ರೀತಿ ಬರುತ್ತದೆ ಎಂದು ನಾನು ಎಲ್ಲೂ ಹೇಳಿಲ್ಲ. ಕೆಲಸ ನಿಂತು ಹೋಗಿದೆ, ಮಾನ್ಸಿಯಲ್ಲಿ ನೀರು ಬಂದಿಲ್ಲ, ಒಂದು ಕಡೆ ಬಂದಿಲ್ಲ, ಒಂದು ಕಡೆ ಬಂದಿದೆ. ಸಿಂಧನೂರಿನಲ್ಲಿ, ಗಂಗಾವತಿಯಲ್ಲಿ ಈ ಕೆನಾಲ್ ಏರಿಯಾದಿಂದಲೇ ನೀರು ಹಾಯಿಸುವುದಕ್ಕೆ ಅವಕಾಶವಾಗಲಾರದು.

ಶ್ರೀ ಎಂ. ನಾಗಪ್ಪ.—ಈ ಹಳ್ಳಿಗಳಿಗೆ ನೀರು ಬರಬೇಕಾದರೆ ತಾವು ಹೇಳುವಂತೆ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಸೆಕೆಂಡ್ ಸ್ಟೇಜನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್. —ಫಸ್ಟ್ ಸ್ಟೇಜ್ ಈಗ ಪ್ರಾರಂಭ ಮಾಡಿದ್ದೇವೆ, ಸೆಕೆಂಡ್ ಸ್ಟೇಜ್ ಯಾವಾಗ ಬರುತ್ತದೆ ಎಂದು ಈಗ ಹೇಳುವುದು ಕಷ್ಟ.